# ಆತ್ಮಜ್ಞಾನಿ ಜಡಭರತ ಋಷಿ (ಪೌರಾಣಿಕ ಕಥೆ)

**ಲೇಖಕ : ವೈ. ಶಂಕರನಾರಾಯಣ ರಾವ್**

ಮನುಜರು ಎಸಗುವ ಪಾಪಗಳಿಗೆ ತಕ್ಕ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವುದು ಪಾಪನಾಶಕ್ಕಿರುವ ಒಂದು ಅಂಶಕ ಪರಿಹಾರೋಪಾಯ. ಪ್ರಾಯಶ್ಚಿತ್ತವೆಂಬುವುದು ಪಾಪವೆಂಬ ರೋಗದ ಉಪಶಮನಕ್ಕಾಗಿ ಇರುವ ಔಷಧಿಯೇ ಹೊರತು ಇದರಿಂದ ರೋಗ ಪೂರ್ತಿಯಾಗಿ ವಾಸಿಯಾಗಲಾರದು. ಯೋಗಿಗಳು ತಪಸ್ಸು, ಬ್ರಹ್ಮಚರ್ಯ, ಶಮ-ದಮ, ತ್ಯಾಗ, ಸತ್ಯ, ಶೌಚ, ಯಮ-ನಿಯಮಗಳಿಂದ ತಮ್ಮಿಂದಾಗುವ ಪಾಪ ಕರ್ಮಗಳ ಸೋಂಕನ್ನು ಪೂರ್ತಿಯಾಗಿ ನಿವಾರಿಸಿಕೊಳ್ಳಬಲ್ಲರು. ಆದರೆ ಇದು ಸಾಮಾನ್ಯರಿಗೆ ಕಷ್ಟ ಸಾಧ್ಯವಾದ ಹೊಲಬು. ಇದಕ್ಕಿಂತಲೂ ಸುಲಭವಾದ ಮಾರ್ಗವೆಂದರೆ ಭಕ್ತಿಯೋಗ. ಭಾಗವತರೆಂದರೆ ಭಾಗವತ ಧರ್ಮವನ್ನು ಪರಿಪಾಲಿಸಿಕೊಂಡು ಬರುವ ಭಗವದ್ಭಕ್ತರೆಂಬ ಅರ್ಥವನ್ನು ಕೊಡುತ್ತದೆ. ಅನನ್ಯ ಭಕ್ತಿಯಿಂದಲೇ ಸಾಧನೆಯ ಶಿಖರವನ್ನೇರಿ ಭಗವಂತನನ್ನು ಒಲಿಸಿಕೊಂಡು ಮೋಕ್ಷವನ್ನು ಸಾಧಿಸಿದ ಭಕ್ತರ ವಿಪುಲವಾದ ದೃಷ್ಟಾಂತ ಕಥೆಗಳ, ಉಪಕಥೆಗಳ ಭಂಡಾರವೇ ಭಾಗವತ. ಇದು ಭಾರತೀಯರ ಪವಿತ್ರ ಪುಣ್ಯ ಗ್ರಂಥಗಳಾದ ರಾಮಾಯಣ, ಮಹಾಭಾರತಗಳ ಸಾಲಿನಲ್ಲಿ ಸೇರುವ ಮತ್ತೊಂದು ಮಹಾನ್ ಪುಣ್ಯಗ್ರಂಥ. ಇಲ್ಲಿ ಪ್ರಸ್ತುತ ಪಡಿಸಿರುವ ಕಥೆಯು ಕೂಡಾ ಭಾಗವತದಿಂದಲೇ ಎತ್ತಿಕೊಂಡಿರುವುದಾಗಿದೆ.

ಶ್ರೀ ಮನ್ನಾರಾಯಣ ಸಂಭೂತನಾದ ಋಷಭದೇವನೆಂಬ ರಾಜನ ಪುತ್ರನಾದ ಭರತನೆಂಬವನು ''ಪಂಚಜನಿ'' ಎಂಬ ಸುಂದರಿಯನ್ನು ಮದುವೆಯಾಗಿ ಭರತ ವರ್ಷವನ್ನು ಆಳುತ್ತಿದ್ದನು. ಮಹಾನ್ ಧರ್ಮಪರಾಯಣನಾದ ಅವನು ಏನೊಂದೂ ಸ್ವಂತದ ಫಲಾಪೇಕ್ಷೆ ಇಲ್ಲದೆ ಲೋಕಕಲ್ಯಾಣಕ್ಕಾಗಿ ಯಜ್ಞ ಯಾಗಾದಿಗಳನ್ನು ಮಾಡುತ್ತಾ ಹತ್ತು ಸಹಸ್ರ ವರ್ಷ ರಾಜ್ಯಭಾರ ನಡೆಸಿ ತನ್ನ ಕರ್ಮಗಳನ್ನು ಸವೆಯಿಸಿದನು. ಅನಂತರ ತನ್ನ ವೃದ್ಧಾಪ್ಯದಲ್ಲಿ ರಾಜ್ಯವನ್ನು ತನ್ನ ಮಕ್ಕಳಿಗೆ ಹಂಚಿಕೊಟ್ಟು ಗಂಡಕೀ ನದೀ ತಟದಲ್ಲಿರುವ ಹರಿಕ್ಷೇತ್ರವೆಂಬಲ್ಲಿ ಪ್ರಲಹ ಋಷಿಯ ಆಶ್ರಮದಲ್ಲಿ ನೆಲೆನಿಂತನು. ಅಲ್ಲಿ ಕಠಿಣವಾದ ತಪಸ್ಸನ್ನು ಆಚರಿಸುತ್ತಾ ಸದಾ ದೇವರ ಧ್ಯಾನದಲ್ಲಿ ಏಕಾಗ್ರನಾಗಿ ಆಂತರಂಗಿಕವಾದ ಆನಂದದಿಂದ ಮೈಮರೆತು ದೈವಸಾಕ್ಷಾತ್ಕಾರದ ದಿನದತ್ತ ಸಮೀಪಿಸುತ್ತಿದ್ದನು.

ಒಂದು ದಿನ ಮುಂಜಾನೆ ಭರತ ಮುನಿಯು ಸೂರ್ಯೋಪಾಸನೆ ಮಾಡುತ್ತಾ ಗಂಡಕೀ ನದೀ ತೀರದಲ್ಲಿ ಕುಳಿತಿರಲು ತುಂಬುಗರ್ಭಿಣಿಯಾದ ಹೆಣ್ಣು ಜಿಂಕೆಯೊಂದು ನೀರಡಿಕೆಯನ್ನು ನಿವಾರಿಸಿಕೊಳ್ಳಲೆಂದು ನದಿಗೆ ಇಳಿಯಿತು. ಆ ಸಮಯದಲ್ಲಿ ಸಮೀಪದಿಂದ ಒಂದು ಸಿಂಹವು ಭೀಕರವಾಗಿ ಗರ್ಜಿಸಿದುದು ಕೇಳಿಬಂದಿತು. ಭಯಭೀತವಾದ ಹರಿಣವು ಚಂಗನೆ ನೆಗೆದು ಆಚೆಗೆ ಓಡಿ ಹೋಗಲು ಯತ್ನಿಸಿದ ರಭಸಕ್ಕೆ ಗರ್ಭಸ್ರಾವವಾಗಿ ಮರಿಯು ಹೊಳೆಗೆ ಬಿತ್ತು. ತಾಯಿ ಹರಿಣವು ಓಡುತ್ತಾ ದಡದ ಮೇಲೇರಿ ಸತ್ತು ಬಿದ್ದಿತ್ತು.

ಹೊಳೆಯ ನೀರಿನಲ್ಲಿ ಕೊಚ್ಚಿಕೊಂಡು ಹೋಗುತ್ತಿದ್ದ ಮರಿಯನ್ನು ಕಂಡು ಭರತ ಮುನಿಯು ಕರುಣೆಗೊಂಡು ಎತ್ತಿ ತಂದು ರಕ್ಷಿಸಿದನು. ಆತನ ಈ ದಯಾಗುಣವೇ ಮುಂದೆ ಅವನಿಗೆ ಮುಳುವಾಯಿತು. ನಿರ್ಮೋಹಿತನಾಗಿ ಜಗದ ಜಂಜಡಗಳನ್ನು ಕಡಿದೊಗೆದು ವೈರಾಗ್ಯ ಪರವಶನಾಗಿದ್ದ ಅವನು ಜಿಂಕೆ ಮರಿಯ ಪೋಷಣೆಯಲ್ಲಿ ಸ್ನಾನ, ಧ್ಯಾನ, ತಪಸ್ಸು, ಯೋಗಾದಿಗಳನ್ನು ಮರೆತನು. ಸದಾ ಮರಿಯನ್ನು ಮುದ್ದಿಸುವುದು; ತೊಡೆಯ ಮೇಲೇರಿಸಿಕೊಂಡು ತಟ್ಟುವುದು; ಕಾಲ ಕಾಲಕ್ಕೆ ಅದಕ್ಕೆ ಹುಲ್ಲು ನೀರುಗಳನ್ನು ಕೊಡುವುದು; ಅದು ತಪ್ಪಿಸಿಕೊಂಡು ಹೋಗದಂತೆ ಸದಾ ಕಾವಲಿರುವುದು - ಇವೆಲ್ಲ ಜೀವನ ವಿಧಾನಗಳಿಂದ ಮೋಹಭ್ರಾಂತನಾದನು. ''ನನ್ನ ಮರಿಯನ್ನು ಕ್ರೂರ ಮೃಗಗಳು ಎಲ್ಲಿ ಕೊಂದು ಭಕ್ಷಿಸುವವೋ? ಪಾಪ, ನಾನೆಂದರೆ ಅದಕ್ಕೆ ತುಂಬಾ ಪ್ರೀತಿ'' ಎಂದು ಅಂದುಕೊಂಡು ತಾನು ಹೋದಲ್ಲೆಲ್ಲಾ ಅದನ್ನು ಕರೆದುಕೊಂಡು ಹೋಗುವನು. ಅದು ಆಯಾಸಗೊಂಡು ನಿಂತರೆ ಅದನ್ನು ಹೆಗಲ ಮೇಲೆ ಹೊತ್ತುಕೊಂಡು ಹೋಗುವನು. ಒಟ್ಟಿನಲ್ಲಿ ಜಿಂಕೆಮರಿಯು ಆತನಿಗೆ ಪ್ರಾರಬ್ಧ ಕರ್ಮವಾಗಿ ಪೀಡಿಸಿ ಅವನ ಭಕ್ತಿಯೋಗ ಬಯಲಾಯಿತು.

ಹೀಗಿರಲು ಮುಸ್ಸಂಜೆ ಕಳೆದು ಕಾವಳವು ಮುಸುಕುವಂತೆ ಮೃತ್ಯುವು ಅವನನ್ನು ಆವರಿಸಿತು. ಆತನು ಸಾಯುವ ವೇಳೆಯಲ್ಲಿ ಆತನ ಬಳಿಯಲ್ಲಿಯೇ ಕುಳಿತು ಕಣ್ಣೀರಿಡುತ್ತಾ ದುಃಖಿಸುತ್ತಿದ್ದ ಜಿಂಕೆಯ ಮರಿಯಲ್ಲಿಯೇ ನಟ್ಟ ಮನಸ್ಸುಳ್ಳವನಾಗಿ ಇದ್ದುದರ ಫಲವಾಗಿ ಮರುಜನ್ಮದಲ್ಲಿ ಅವನು ಜಿಂಕೆಯಾಗಿ ಹುಟ್ಟಬೇಕಾಯಿತು. ಪೂರ್ವಜನ್ಮದಲ್ಲಿ ಮಾಡಿದ್ದ ದೈವಾರಾಧನೆಯ ಫಲದಿಂದ ಈ ಜಿಂಕೆಗೆ ತನ್ನ ಹಿಂದಿನ ಜನ್ಮದ ತಪ್ಪಿನ ಅರಿವಾಗಿ ಅದು ತನ್ನ ಹಿಂಡನ್ನಗಲಿ ಪ್ರಲಹಾಶ್ರಮಕ್ಕೆ ಹೊರಟು ಬಂದಿತು. ಅಲ್ಲಿ ತರಗೆಲೆಗಳನ್ನು ತಿಂದುಕೊಂಡು ಜೀವಿಸುತ್ತಾ ಕೊನೆಗಾಲದಲ್ಲಿ ತನ್ನ ದೇಹವನ್ನು ಗಂಡಕೀ ನದಿಯಲ್ಲಿ ವಿಸರ್ಜಿಸಿ ತನ್ನ ಪ್ರಾರಬ್ಧ ಕರ್ಮವನ್ನು ಮುಗಿಸಿ ಮುಂದೆ ಬ್ರಾಹ್ಮಣ ಕುಮಾರನಾಗಿ ಮರುಜನ್ಮವೆತ್ತಿತು.

ದ್ವಿಪತ್ನಿಯರನ್ನು ಹೊಂದಿದ್ದ ಅಂಗೀರಸನೆಂಬ ಬ್ರಾಹ್ಮಣನಿಗೆ ಹಿರಿಯ ಹೆಂಡತಿಯಲ್ಲಿ ಒಂಬತ್ತು ಮಕ್ಕಳೂ ಕಿರಿಯವಳಲ್ಲಿ ಭರತನೂ ಅವನ ತಂಗಿಯೂ ಜನಿಸಿದರು. ಅವನ ಅಣ್ಣಂದಿರೆಲ್ಲರೂ ವಿದ್ಯಾವಂತರೂ ಬುದ್ಧಿವಂತರೂ ಆಗಿದ್ದರೂ. ಭರತನಿಗೆ ಪೂರ್ವಜನ್ಮದ ಸ್ಮರಣೆ ಇದ್ದುದರಿಂದ ಲೌಕಿಕದ ಮೇಲೆ ಆಸಕ್ತಿ ಇಲ್ಲದೆ ಹುಚ್ಚನಂತೆ, ಕಿವುಡನಂತೆ, ಮೂಗನಂತೆ ನಟಿಸುತ್ತಾ ಸದಾ ಒಂಟಿಯಾಗಿದ್ದನು. ಅವನ ತಂದೆ ತಕ್ಕ ಸಮಯದಲ್ಲಿ ಅವನಿಗೆ ಉಪನಯನ ಸಂಸ್ಕಾರ ನೆರವೇರಿಸಿ ಬಿಟ್ಟೂ ಬಿಡದೆ ನಾಲ್ಕು ತಿಂಗಳು ಗಾಯತ್ರೀ ಮಂತ್ರವನ್ನು ಉರು ಹಾಕಿಸಿದರೂ ಅವನ ನಾಲಿಗೆಯ ಮೇಲೆ ಮಂತ್ರವು ನೆಲೆಸದಾಯಿತು. ಪೂರ್ವಜನ್ಮದ ಸಂಸ್ಕಾರದಿಂದ ಎಲ್ಲಾ ಸತ್ಕರ್ಮಗಳಲ್ಲಿಯೂ ಪಾರಂಗತನಾದ ಅವನಿಗೆ ತೋರಿಕೆಯ ಬ್ರಾಹ್ಮಣ್ಯದ ಆವಶ್ಯಕತೆ ಇಲ್ಲವಾಗಿ ಮಡಿ ಬ್ರಾಹ್ಮಣರಿಗೆ ಅವನೊಂದು ಬಿಡಿಸಲಾಗದ ಕಗ್ಗಂಟಾಗಿ ಹೋದನು. ಮಗನ ಚಿಂತೆಯಲ್ಲೇಯೇ ಸವೆದು ಮಡಿದ ಅವನ ತಂದೆಯನ್ನು ಅನುಸರಿಸಿ ಅವನ ತಾಯಿಯೂ ಸಹಗಮನ ಮಾಡಿದಳು.

ಬಾಲ್ಯದಲ್ಲಿಯೇ ತಬ್ಬಲಿಯಾದ ಭರತನು ಹುಚ್ಚನಂತೆ, ಬೆಪ್ಪನಂತೆ, ಮೂಗನಂತೆ ಬರಿಮೈಲಿ ತಿರುಗಾಡುತ್ತಾ, ನೆಲದ ಮೇಲೆ ಮಲಗುತ್ತಾ, ಮೃಷ್ಟಾನ್ನವೋ, ತಂಗಳನ್ನವೋ ಯಾರು ಏನನ್ನು ಕೊಟ್ಟರೂ ತಿನ್ನುತ್ತಾ ದಷ್ಟಪುಷ್ಟ ದೇಹಧಾರಿಯಾಗಿ ಯಾರು ಯಾವ ಕೆಲಸವನ್ನು ಹೇಳಿದರೂ ಮರು ಮತನಾಡದೆ ಮಾಡಿ ಮುಗಿಸುತ್ತಿದ್ದನು. ಅವನ ಜಡೆಗಟ್ಟಿದ ತಲೆ, ಹರಕು ಬಟ್ಟೆ, ಕೊಳೆತುಂಬಿದ ಕಪ್ಪುಗಟ್ಟಿದ ಜನಿವಾರ ಇವು ಜನರ ಹಾಸ್ಯದ ವಸ್ತುಗಳಾಗಿ ಜನ ಅವನನ್ನು ''ಹುಚ್ಚು ಬ್ರಾಹ್ಮಣ'' ''ಜಡಭರತ'' ಎಂದು ಗೇಲಿ ಮಾಡುವರು. ಅವನಿಂದ ಬಿಟ್ಟಿ ಕೆಲಸ ದುಡಿಸಿಕೊಳ್ಳುವರು. ಅವನ ಅಣ್ಣಂದಿರೂ ಅವನಿಂದ ತಮ್ಮ ಗದ್ದೆಯ ಕೆಲಸಗಳನ್ನು ಮಾಡಿಸಿ ಅವನಿಗೆ ಗಂಜಿಯ ತೆಳಿಯನ್ನೋ, ತೌಡು - ಹಿಂಡಿಗಳನ್ನೂ ತಿನ್ನಲು ಕೊಡುತ್ತಿದ್ದರು.

(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು)

# ಶ್ರೀಶಾರದಾ ವೇದಿಕೆಯ ಮಹಾಪೋಷಕರಾಗಿ ಶ್ರೀಬಿ. ಕೃಷ್ಣಮೂರ್ತಿರಾವ್, ಅಂಬಲ್ಪಾಡಿ



**ಉಡುಪಿಯ ಸ್ಥಾನಿಕ ದ್ರಾವಿಡಬ್ರಾಹ್ಮಣ ಸಂಘದ ನಿರ್ದೇಶಕರಾದ ಶ್ರೀ ಬಿ. ಕೃಷ್ಣಮೂರ್ತಿ ರಾವ್ ಇವರು ಶ್ರೀ ಶಾರದಾ ವೇದಿಕೆಯ ಮಹಾ ಪೋಷಕರಾಗಿ ಪತ್ರಿಕೆಯನ್ನು ಪ್ರೋತ್ಸಾಹಿಸಿದ್ದಾರೆ.**

**ಉಡುಪಿ ಅಂಬಲ್ಪಾಡಿಯಲ್ಲಿ ವಾಸ್ತವ್ಯವಿರುವ ಶ್ರೀಯುತ ಕೃಷ್ಣಮೂರ್ತಿ ರಾಯರು ಮೂಲತಃ ಬಪ್ಪನಾಡಿನವರು. ಇವರು 03-10-1944ರಲ್ಲಿ ಜನಿಸಿದ್ದು ಮುಲ್ಕಿ ಸರಕಾರಿ ಪ್ರೌಢಶಾಲೆಯಲ್ಲಿ ಎಸ್.ಎಸ್.ಎಲ್.ಸಿ. ಮುಗಿಸಿ 03-04-1965 ರಲ್ಲಿ ಮಂಗಳೂರಿನಲ್ಲಿರುವ ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಕ್ಯಾಷಿಯರ್ ಆಗಿ ಕೆಲಸಕ್ಕೆ ಸೇರಿದರು. ಬ್ಯಾಂಕಿನಲ್ಲಿರುವಾಗಲೇ ಎಂ.ಎ. ಪಾಸ್‌ಮಾಡಿ, ಬೇರೆ ಬೇರೆ ಶಾಖೆಗಳಲ್ಲಿ ಕೆಲಸಮಾಡಿ, ಪದೋನ್ನತಿ ಹೊಂದಿ ಬ್ಯಾಂಕಿನಲ್ಲಿ ಒಟ್ಟು 40ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿ ಅಕ್ಟೋಬರ್ 2004ರಲ್ಲಿ ಮುಖ್ಯಪ್ರಬಂಧಕರಾಗಿ ನಿವೃತ್ತಿ ಹೊಂದಿದರು.**

**ಶ್ರೀಯುತ ಕೃಷ್ಣಮೂರ್ತಿ ರಾಯರ ಧರ್ಮಪತ್ನಿ ಶ್ರೀಮತಿ ಇಂದಿರಾ ಸಿಂಡಿಕೇಟ್ ಬ್ಯಾಂಕ್ ಉಡುಪಿಯಲ್ಲಿ ಸೇವೆ ಸಲ್ಲಿಸುತ್ತಿದ್ದು ಇವರಿಗೆ ಮೂವರು ಪುತ್ರಿಯರು ಇದ್ದಾರೆ. ಶ್ರೀಯುತ ಕೃಷ್ಣಮೂರ್ತಿ ರಾಯರು ಉಡುಪಿಯ ಸ್ಥಾನಿಕ ದ್ರಾವಿಡಬ್ರಾಹ್ಮಣ ಸಂಘದ ಸಕ್ರಿಯ ಸದಸ್ಯರಾಗಿದ್ದು ವಿವಿಧ ವೇದಿಕೆಗಳ ಚಟುವಟಿಕೆಗಳಲ್ಲಿ ಉತ್ಸುಕತೆಯಿಂದ ಪಾಲ್ಗೊಳ್ಳುತ್ತಿದ್ದಾರೆ. ಇವರು ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯ ನಿರ್ದೇಶಕರೂ ಆಗಿದ್ದಾರೆ.**

**ಈ ಸಂದರ್ಭದಲ್ಲಿ ಶ್ರೀಯುತ ಬಿ. ಕೃಷ್ಣಮೂರ್ತಿ ರಾವ್ ಇವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಾ ಇವರಿಗೆ ಮತ್ತು ಇವರ ಕುಟುಂಬವರ್ಗದವರಿಗೆ ಶ್ರೀ ಶಾರದಾ ಮಾತೆಯು ಇನ್ನೂ ಹೆಚ್ಚಿನ ಶ್ರೇಯಸ್ಸನ್ನುಂಟು ಮಾಡಲಿ, ಇವರಿಗೆ ವಿಶ್ರಾಂತ ಜೀವನದಲ್ಲಿ ಆಯುಷ್ಯ ಆರೋಗ್ಯಾದಿ ಸಕಲ ಸೌಭಾಗ್ಯಗಳನ್ನು ಕರುಣಿಸಲೆಂದು ತಾಯಿ ಶಾರದೆಯಲ್ಲಿ ಪ್ರಾರ್ಥಿಸುತ್ತೇವೆ.**

# ಜೀರ್ಣೋದ್ಧಾರ -ನೆಲೆ, ಹಿನ್ನೆಲೆ

(ಹಿಂದಿನ ಸಂಚಿಕೆಯಿಂದ....)

**ಬ. ಎ. ಶರ್ಮ, ರಜತಪೀಠಪುರಂ**

ತೀರ್ಥದ ಸಮೀಪ, ಸರೋವರದ ಸಮೀಪ, ಸಮುದ್ರತೀರ, ನದೀ ಸಂಗಮ ಸ್ಥಾನ, ಪರ್ವತ ಪ್ರದೇಶ, ಕಾಡು, ಉದ್ಯಾನ, ಉಪವನ, ಸಿದ್ಧಕ್ಷೇತ್ರ, ಗ್ರಾಮ, ಪುರ, ಪಟ್ಟಣ, ಒಳ್ಳೆಯ ಸುಂದರವಾದ ಸ್ಥಳದಲ್ಲಿ ದೇವಾಲಯ ನಿರ್ಮಾಣಕ್ಕೆ ಭೂಪರಿಗ್ರಹವನ್ನು ಮಾಡಬೇಕು.

ಇಂತಹ ಒಂದು ಪ್ರಶಸ್ತವಾದ ಪ್ರದೇಶದಲ್ಲಿ ದೇವಾಲಯ ನಿರ್ಮಾಣ, ಪ್ರತಿಷ್ಠಾದಿ ಕಾರ್ಯಗಳು ನೆರವೇರಬೇಕಾದರೆ ಅಲ್ಲಿ ಯಜಮಾನ, ಆಚಾರ್ಯ, ಶಿಲ್ಪಿ, ದೈವಜ್ಞ ಇವರು ಪ್ರಧಾನ ಪಾತ್ರವನ್ನು ವಹಿಸುತ್ತಾರೆ. ದೇವಾಲಯ ನಿರ್ಮಾಣದಂತಹ ಒಂದು ಉತ್ತಮವಾದ ಕಾರ್ಯವನ್ನು ಸಂಕಲ್ಪಿಸಿ ಅದರಲ್ಲಿ ತತ್ಪರರಾದವರು ಹೇಗೆ ಇರಬೇಕು ಎಂಬುದಾಗಿ ಇವರ ಲಕ್ಷಣವನ್ನು ಶಾಸ್ತ್ರರಚನಾಕಾರರು ತಿಳಿಸಿದ್ದಾರೆ. ವರ್ಣಾಶ್ರಮಾಧಿಕೃತ ಕರ್ಮರತಸ್ತದುಕ್ತ- ನ್ಯಾಯಾತ್ತ ವಿತ್ತನಿಚಯಃ ಪರಮಸ್ಯ ಪುಂಸಃ । ನಿತ್ಯಾರ್ಚನಾದಿ ವಿಧಯೇ ಪ್ರತಿಮಾ ಪ್ರತಿಷ್ಠಾ । ಕರ್ಮೋನ್ಮನಾ ಗುರುವರಂ ಪ್ರಥಮಂ ವೃಣೀತ ॥ - ವರ್ಣಾಶ್ರಮ ಧರ್ಮಗಳಿಗೆ ಅನುರೂಪವಾದ ಕರ್ಮಗಳಲ್ಲಿ ಆಸಕ್ತವಾದ, ನ್ಯಾಯಾರ್ಜಿತ ಸ್ವತ್ತುಗಳುಳ್ಳ ಯಜಮಾನನು ಪರಮ ಪುರುಷನಿಗೆ ನಿತ್ಯವೂ ಸಲ್ಲಿಸುವ ಪೂಜಾದಿವಿಧಿಗೋಸ್ಕರ ದೇವ ಪ್ರತಿಷ್ಠೆಯನ್ನು ಮಾಡಲು ಉತ್ಸುಕನಾಗಿ ಪ್ರಾರಂಭದಲ್ಲಿ ಗುರುವರಣೆಯನ್ನು ಮಾಡಬೇಕು. ಕೃತ್ವಾ ತ್ರೇಥಾ ಸ್ವಸಂಪಾದಿತ.... ಈ ರೀತಿ ಸಂಪಾದಿಸಿದ ದ್ರವ್ಯವನ್ನು 3 ಭಾಗ ಮಾಡಿ ನಿತ್ಯ ಕರ್ಮಾದಿ ಸಿದ್ಧಿಗೋಸ್ಕರ 1 ಭಾಗವನ್ನು ದೇವತಾರ್ಥವಾಗಿಯೂ, 1 ಭಾಗವನ್ನು ಗುರ್ವರ್ಥವಾಗಿಯೂ ಕೊಟ್ಟು ಉಳಿದ ಭಾಗವನ್ನು ತನ್ನ ಸಂಸಾರ ರಕ್ಷಣೆಗೆ ಇಟ್ಟುಕೊಂಡು ದೇವರ ಪೂಜಾದಿ ವಿನಿಯೋಗವನ್ನು ವಿಧಿಪ್ರಕಾರ ನಡೆಸಬೇಕು. 'ನ ಪ್ರತಿಷ್ಠಾ ಸಮೋರಿಪುಃ' ಪ್ರತಿಷ್ಠೆಗೆ ಸಮನಾದ ಶತ್ರುವಿಲ್ಲ ಎಂಬ ಮಾತು ಪ್ರತಿಷ್ಠಾ ವಿಧಿಯಲ್ಲಿ ಪ್ರಧಾನನಾದ ಆಚಾರ್ಯನ ಗುರುತಮ ಜವಾಬ್ದಾರಿಯನ್ನು ತಿಳಿಸುತ್ತದೆ. ಅಂತಹ ಆಚಾರ್ಯನ ಲಕ್ಷಣವನ್ನು ಶಾಸ್ತ್ರವು ತಿಳಿಸಿದೆ. ವಿಪ್ರಃ ಕುಲೀನಃ ಕೃತಸಂಸ್ಕ್ರಿಯರ್ಘಃ ಸ್ವಧೀತ ವೇದಾಗಮ ತತ್ತ್ವವೇತ್ತಾ । ವರ್ಣಾಶ್ರಮಾಚಾರ ಪರೋಽಧಿದೀಕ್ಷಃ, ದಕ್ಷಸ್ತಪಸ್ವೀ ಗುರುರಾಸ್ತಿ ಕೋಽಸ್ತು ॥ - ಉತ್ತಮ ಕುಲದಲ್ಲಿ ಜನಿಸಿದ, ಷೋಡಶ ಸಂಸ್ಕಾರಗಳಿಂದ ಸಂಸ್ಕೃತನಾದ, ವೇದ-ಆಗಮ-ತತ್ವ ಶಾಸ್ತ್ರಗಳ ಜ್ಞಾನವುಳ್ಳ, ವರ್ಣಾಶ್ರಮ ಧರ್ಮವನ್ನು ಪರಿಪಾಲಿಸುವ, ದೀಕ್ಷಾ ಬದ್ಧನಾದ, ಸಮರ್ಥನೂ, ತಪಸ್ವಿಯೂ, ಆಸ್ತಕನೂ ಆದ ಬ್ರಾಹ್ಮಣನು ಗುರುವಾಗಿರಲಿ. (ವೇದ ಪ್ರಾಮಾಣ್ಯವನ್ನಂಗೀಕರಿಸುವವನು ಆಸ್ತಿಕ ತದ್ಭಿನ್ನಃ ನಾಸ್ತಿಕಃ) ಅಚ್ಛಾಕಲ್ಪ-ಮನಲ್ಪ ಶಾಸ್ತ್ರ ನಿಚಯಂ ಸ್ವಚ್ಛಂದಮಚ್ಛಂ ಗುರೋಃ, ಆಜ್ಞಾವಸ್ಥಿತ ವಿತ್ತಸಂಚಯ ಯುತಂ ಸ್ವಲ್ಪಾ ಶಮಲ್ಪಾ ಲಸಮ್ । ಸುಪ್ರೀತಂ ಪ್ರಿಯದರ್ಶನಂ ಬಹುಗುಣಾಽವಾಸಂ ಸ್ವಧರ್ಮಸ್ಥಿತಮ್, ಸ್ವಾಢ್ಯಂ ಜಾಡ್ಯ ವಿಹೀನದಾರ್ಢ್ಯ ಹೃದಯಂ ಶ್ರದ್ಧಾ ಬಲೋತ್ಸಾಹಕಮ್ ॥ - ಆಚಾರ್ಯನು ಸುಂದರನೂ, ಅನೇಕ ಶಾಸ್ತ್ರವೇತ್ತನೂ, ಸ್ವತಂತ್ರ ವ್ಯಕ್ತಿತ್ವವುಳ್ಳವನೂ, ಗುರು ಶುಶ್ರೂಷಕನೂ, ಆಜ್ಞೆಯಿಂದಲೇ ಧನ ಸಂಗಹ ಮಾಡಬಲ್ಲವನೂ, ಅಲ್ಪ ಆಹಾರ ಸೇವಿಯೂ, ಆಲಸ್ಯವಿಲ್ಲದವನೂ, ಸಂತೋಷದಿಂದ ಇರುವವನೂ, ಮಂದಸ್ಮಿತ ವದನನೂ, ಬಹುಗುಣಿಯೂ, ಸ್ವಧರ್ಮ ನಿರತನೂ, ಗಂಭೀರ ಪ್ರಕೃತಿಯವನೂ, ವಿಲಂಬವಿಲ್ಲದೆ ದೃಢನಿರ್ಧಾರ ಕೈಗೊಳ್ಳುವವ, ಶ್ರದ್ಧಾ-ಬಲ-ಉತ್ಸಾಹವುಳ್ಳವನೂ ಆಗಿರಬೇಕು. ಇಷ್ಟೇ ಅಲ್ಲದೆ ಆರೋಗ್ಯವಂತನೂ, ಪರದ್ರವ್ಯಾಪೇಕ್ಷೆ ಇಲ್ಲದವನು, ಗುರು-ಬ್ರಾಹ್ಮಣ-ದೇವ ಪೂಜಾದಿಗಳ ಕಲ್ಪನೆಯಲ್ಲಿ ನಾನಾರೀತಿಯ ಕುಶಲತೆಯುಳ್ಳವನೂ, ಚಿಂತಾಶೋಕ ಭಯಾದಿ ರಹಿತನೂ, ಶುದ್ಧ ಬುದ್ಧಿಯವನೂ ಆಗಿರಬೇಕು. ಹಾಗೆಯೇ ದೈವಜ್ಞನೂ ಕೂಡ ವೇದಾಧ್ಯಾಯೀ, ವಿನಯಶೀಲ, ಉತ್ತಮ ಕುಲದಲ್ಲಿ ಜನಿಸಿದವನು, ಪಂಚಸಿದ್ಧಾಂತ ಕೋವಿದನೂ, ಊಹಾಪೋಹ ಪಟುವೂ ಆಗಿರಬೇಕು. ಅದೇ ರೀತಿಯಲ್ಲಿಯೂ, ಶಿಲ್ಪಿಯೂ ಶಿಲ್ಪಶಾಸ್ತ್ರದ ಸಕಲ ವಿಚಾರಗಳನ್ನು ತಿಳಿದುಕೊಂಡಿರಬೇಕು. ಧರ್ಮ ಬುದ್ಧಿಯವನೂ, ಕುಲೀನನೂ ಆಗಿರಬೇಕು. ಆಚಾರ್ಯರಿಂದ ಪ್ರತಿಷ್ಠಾಪಿಸಲ್ಪಟ್ಟ, ಶಿಲ್ಪಿ ಕಡೆದು ಕೊಟ್ಟ ಬಿಂಬವು ಸಾಮಾನ್ಯತಃ ಈ ಲಕ್ಷಣವನ್ನು ಹೊಂದಿರುತ್ತದೆ. ಶ್ರೀ ಮದ್ರತ್ನ ಕಿರೀಟ ಕುಂಡಲ ಯುಗಗ್ರೈವೇಯ........ ಅಂದರೆ ರತ್ನ ಕಿರೀಟ, ಮಕರ ಕುಂಡಲ, ಕಂಠಾಭರಣ, ತೋಳೊಡವೆ, ಕೈಕಡಗ, ಯಜ್ಞೋಪವೀತ, ಸೊಂಟಪಟ್ಟಿ, ಪೀತಾಂಬರ, ನೂಪುರ ಮುಂತಾದ ಆಭರಣಗಳನ್ನು ಆಯಾ ಮೂರ್ತಿಗೆ ಅನುರೂಪವಾಗಿ ರಚಿಸಬೇಕು.

(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು)